ಭಟ್ಟರ್ ಸ್ಕಾಚ್

● ವಿ.ಹೇಮಂತಕುಮಾರ, ಬೆಂಗಳೂರು
ಭಟ್ರೇ, ಹೆಂಡತಿ ಆಗಾಗ ಅತಿಯಾದ ಪ್ರೀತಿ ತೋರಿಸುವ ಗುಟ್ಟೇನು?
- ಹೇಮಂತು, ಯಾರ ಹೆಂಡತಿ ಎಂಬುದನ್ನು ಸ್ಪಷ್ಟಪಡಿಸಬೇಕಿತ್ತು ಅಲ್ವಾ?!

● ಶಿವಲಿಂಗಪ್ಪ ಸಿಂಗಶೆಟ್ಟಿ, ಕಲಬುರ್ಗಿ
ಭಟ್ರೇ, ಅನಂತಕುಮಾರ ಹೆಗಡೆಯವರನ್ನು ಬಿಜೆಪಿ, ಮುತಾಲಿಕ್ ಸಾಲಿಗೆ ಸೇರಿಸಿಬಿಟ್ಟಿತಾ?
- ಯತ್ನಾಳ್ ಯಾವ ತಪ್ಪು ಮಾಡಿದ್ದರಂತೆ?!

● ಪ್ರಕಾಶ ಮಾಡಾಳು, ಬೆಂಗಳೂರು
ಭಟ್ರೇ, ನನ್ನ ಇಡೀ ಜೀವನವನ್ನು ದೇಶಕ್ಕಾಗಿ ಮುಡಿಪಾಗಿ ಇಟ್ಟಿದ್ದೇನೆ ಅಂತ ಜೈಲುವಾಸಿ ಕೇಜ್ರಿವಾಲ ಹೇಳಿದ್ದಾರಲ್ಲ?
- ಜೈಲು ಸಹ ದೇಶದ ಭಾಗವೇ ತಾನೇ?!

● ಬೆಂ.ಮು.ಮಾರುತಿ, ಬೆಂಗಳೂರು
ಭಟ್ರೇ, ಲಕ್ಷ್ಮೀ ಹೆಬ್ಬಾಳ್ಕರ್ ಮೈಯಲ್ಲಿ ಹರಿಯುತ್ತಿರೋದು ಕಿತ್ತೂರು ರಾಣಿ ಚೆನ್ನಮ್ಮನ ರಕ್ತವೆಂದು ಹೇಳ್ತಿದಾರಲ್ಲ?
- ಫುಲ್ ಕನ್‌ಫ್ಯೂಸ್ ಮಾಡಬೇಡ.. ಕಾರಣ ಅವರ ಮಗನ ಮೈಯಲ್ಲಿ ಹರಿಯುತ್ತಿರುವುದು ಪಂಚಮಸಾಲಿ ರಕ್ತವಂತೆ!

● ನಾಗರಾಜ ಡೋಣೂರ, (ಇಮೇಲ್ ಮೂಲಕ)
ಭಟ್ರೇ, ಕಪಾಳಕ್ಕೆ ಹೊಡೆಯಿರಿ ಅಂತ ಸಚಿವ ತಂಗಡಗಿ ಏಕೆ ಹೇಳಿರಬಹುದು?
- ಅರಿವು ಮೂಡಿಸಲು ಹಾಗೆ ಹೇಳಿದ್ದಾಗಿ ತಂಗಡಗಿಯವರೇ ಹೇಳಿದ್ದಾರಲ್ಲ?!

● ರಮೇಶ ಗೌಡ, ಮಳವಳ್ಳಿ
ಭಟ್ರೇ, ಮಂಡ್ಯ ಟಿಕೆಟನ್ನು ಪುಟ್ಟರಾಜುಗೆ ಕೊಡ್ತೀವಿ ಅಂತ ಹೇಳಿ ಕುಮಾರಣ್ಣನೇ ಸ್ಪರ್ಧೆ ಮಾಡ್ತಾ ಇದ್ದಾರಲ್ಲ?
- ಇದನ್ನು ನೋಡಿಯೇ ಚೆಲುವರಾಯಸ್ವಾಮಿ, 'ಮಗನಿಗೆ ಮದುವೆ ಮಾಡಲು ಹೋಗಿ ಅಪ್ಪನೇ ಮದ್ವೆ ಆದಂತಿದೆ' ಎಂದು ಹೇಳಿದ್ದು!

● ರಾಜಶೇಖರ ಹೆಗಡೆ, ಶಿರಸಿ
ಭಟ್ರೇ, ಚುನಾವಣೆ ಸಂದರ್ಭದಲ್ಲಿ ಬಂಡಾಯ ಶಮನ ಮಾಡುವುದೇ ದೊಡ್ಡ ಕೆಲಸವಲ್ಲ?
- ಎಲ್ಲ ಪಕ್ಷಗಳಲ್ಲೂ ಅಗ್ನಿಶಾಮಕ ದಳದ ಘಟಕವನ್ನೇ ತೆರೆಯೋದು ಬಾಕಿ!

● ರಮ್ಯಾ ನಾಡಿಗ್, ಬೆಂಗಳೂರು
ಸರ್, ನನ್ನ ಗಂಡನ ಪಾಸ್‌ವರ್ಡ್ ಏನಿರಬಹುದು?
- ಅವನ ಮಾಜಿ ಪ್ರೇಯಸಿಯ ಹೆಸರನ್ನು ತಿಳಿಸಬಾರದಿತ್ತಾ?!

● ರಾಜೇಶ ನಾಮಪಿಲ್ಲ, ದಾವಣಗೆರೆ
ಭಟ್ರೇ, ಗಣಿತ ಬಹಳ ಒಳ್ಳೆಯ ವಿಷಯ ಅಂತಾರಲ್ಲ?
- ವಿಷಯವೇನೋ ಒಳ್ಳೆಯದು, ಆದರೆ ಉತ್ತರ ತಪ್ಪಾಗಿರುತ್ತದಲ್ಲ?!

● ಸದಾಶಿವ ಬಣಜಿ, ಬೆಳಗಾವಿ
ಭಟ್ರೇ, ಮಂಡ್ಯ ಅಭಿವೃದ್ಧಿಗೆ ತಲೆ ಕೊಡಲು ಸಿದ್ಧ ಎಂದು ಎಚ್ಡಿಕೆ ಹೇಳಿದ್ದಾರಲ್ಲ?
- ಸಮಯ ಕೊಟ್ಟರೆ ಸಾಕು, ತಲೆಯನ್ನು ಅವರೇ ಇಟ್ಟುಕೊಳ್ಳಲಿ!

ಪ್ರಜಾಪ್ರಭುತ್ವಕ್ಕೆ ಅಮರಿಕೊಂಡ ವಿಕೃತಿಗಳು

ಸಂವಿಧಾನವನ್ನು ಬದಲಿಸಬೇಕು, ಸನಾತನ ಧರ್ಮವನ್ನು ಅಳಿಸಿಹಾಕಬೇಕು ಎಂಬ ಮಾತುಗಳು ನಮ್ಮಲ್ಲಿ ಸಾಕಷ್ಟು ಬಾರಿ ಕೇಳಿಬಂದಿರುವುದು ಉಂಟು. ಆದರೆ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯ ವಿರುದ್ಧ ಮಾತು ಬಂದಿಲ್ಲ. ಅಂದರೆ ಈ ಪದ್ಧತಿಯು ನಮ್ಮಲ್ಲಿ ವಿವಾದಾತೀತವಾಗಿ ಬೇರುಬಿಟ್ಟಿದೆ ಎಂದಾಯ್ತು.

ಚರ್ಚಾವೇದಿಕೆ
ಪ್ರೊ.ಆರ್.ಜಿ.ಹೆಗಡೆ
vveditoped@gmail.com

ಮತ್ತೊಂದು ಚುನಾವಣೆ ಬಂದು ನಿಂತಿದೆ. ಹೆಮ್ಮೆಯ ವಿಷಯವೇನೆಂದರೆ, ವಿಶಾಲವಾದ, ಭಾರಿ ಜನಸಂಖ್ಯೆಯುಳ್ಳ ಮತ್ತು ಅಸಮಾನತೆಯನ್ನು ಈಗಲೂ ಹೊಂದಿರುವ ನಮ್ಮ ದೇಶವು ಪ್ರಜಾಪ್ರಭುತ್ವವನ್ನು ಉಳಿಸಿಕೊಂಡೇ ಬಂದಿದೆ. ಒಂದು ದೃಷ್ಟಿಯಿಂದ ಇದು ಅಚ್ಚರಿಯ ವಿಷಯವೂ ಹೌದು. ಏಕೆಂದರೆ, ಭೌಗೋಳಿಕವಾಗಿ, ಸಾಂಸ್ಕೃತಿಕವಾಗಿ ಒಂದು ಉಪಖಂಡವೇ ಆಗಿರುವ, ಜಾತಿ-ಉಪಜಾತಿ-ಧರ್ಮಗಳ ನಡುವಿನ ಮಾನಸಿಕ ಬಿರುಕುಗಳು, ಅನಕ್ಷರತೆ, ದಾರಿದ್ರ್ಯ ಇನ್ನೂ ಇರುವ ನಮ್ಮ ದೇಶದಲ್ಲಿ, ಪ್ರಜಾಪ್ರಭುತ್ವವನ್ನು ಅಪಾಯಕ್ಕೆ ಸಿಲುಕಿಸಿಬಿಡಬಹುದಾದ ಹಲವು ಸಾಮಾಜಿಕ ಅಂಶಗಳು ಇದ್ದವು, ಈಗಲೂ ಇವೆ.

ಬಹುಶಃ ಈ ವಿಷಯಗಳನ್ನು ಗಮನಿಸಿದ್ದ, ನಕಾರಾತ್ಮಕವಾಗಿಯೇ ಇದ್ದ ಕೆಲವು ಪಾಶ್ಚಾತ್ಯ ಘನಂದಾರಿಗಳು ನಮ್ಮ ಪ್ರಜಾಪ್ರಭುತ್ವದ ಕುರಿತಾದ ಕರಾಳ ಭವಿಷ್ಯವನ್ನು ಹೇಳಿ ಮುಗಿಸಿಯೇಬಿಟ್ಟಿದ್ದರು. ಜೆ.ಕೆ.ಗ್ಯಾಲ್‌ಬ್ರೆತ್ ಎಂಬ ಅಮೆರಿಕದ ರಾಜತಂತ್ರಜ್ಞರು, 'ಭಾರತವು ಒಂದು ಕಾರ್ಯಶೀಲವಾಗಿರುವ ಅರಾಜಕತೆ' (Functional Anarchy) ಎಂದು ಹೇಳಿದ್ದರು. 'ಭಾರತೀಯರು ಮತದಾನದ ಹಕ್ಕಿಗೆ ಅರ್ಹರಲ್ಲ; ಇಂಥ ದೇಶವು ಪ್ರಜಾಪ್ರಭುತ್ವವನ್ನು ಪಡೆಯುವುದು ಒಂದು ಭಾರಿ ದುರಂತ' ಎಂದು ಬ್ರಿಟನ್ ಪ್ರಧಾನಿ ಚರ್ಚಿಲ್ ವಾದಿಸಿದ್ದರು. ಈ ಮಾತುಗಳನ್ನೆಲ್ಲ ಸುಳ್ಳಾಗಿಸಿರುವ ಭಾರತವು ಪ್ರಜಾಪ್ರಭುತ್ವವನ್ನು ಬಲವಾಗಿ ಪೋಷಿಸಿಕೊಂಡೇ ಬಂದಿದೆ. ದೇಶದಲ್ಲಿ ಬೇರೆ ಬೇರೆ ಸಂಗತಿಗಳ ಕುರಿತು ಅಪಸ್ವರಗಳು ಕೇಳಿಬರುತ್ತಲೇ ಇರುತ್ತವೆ. ಅಂದರೆ, ಸಂವಿಧಾನವನ್ನು ಬದಲಿಸಬೇಕು, ಸನಾತನ ಧರ್ಮವನ್ನು ಅಳಿಸಿಹಾಕಬೇಕು ಎಂಬ ಮಾತುಗಳು ಕೇಳಿಬಂದಿವೆ; ಆದರೆ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯ ವಿರುದ್ಧ ಮಾತು ಬಂದಿಲ್ಲ. ಅಂದರೆ ಈ ಪದ್ಧತಿಯು ನಮ್ಮಲ್ಲಿ ವಿವಾದಾತೀತವಾಗಿ ಬೇರುಬಿಟ್ಟಿದೆ ಎಂದಾಯ್ತು.

ಆದರೆ, ನಮ್ಮ ಪ್ರಜಾಪ್ರಭುತ್ವದ ಕಾರ್ಯವೈಖರಿಯನ್ನು ಗಮನಿಸುತ್ತಾ ಹೋದಂತೆ, ಹೆಮ್ಮೆಯ ಭಾವನೆ ಮಾಯವಾಗಿ ವಿಷಾದ, ಕಳವಳ, ಆತಂಕ ಮನಸ್ಸನ್ನು ಮೆತ್ತಿಕೊಳ್ಳತೊಡಗುತ್ತವೆ. ವಿಶೇಷವಾಗಿ ಇತ್ತೀಚಿನ ದಶಕಗಳಲ್ಲಿ ನಮ್ಮ ಪ್ರಜಾಪ್ರಭುತ್ವವು ಹೆಸರಿಗಷ್ಟೇ ಉಳಿದುಕೊಂಡು, ಮಿಕ್ಕಂಥ ಅರ್ಥ ಕಳೆದುಕೊಳ್ಳುತ್ತಿದೆಯೇ? ಎಂಬ ಆತಂಕಕಾರಿ ಪ್ರಶ್ನೆ ಏಳಲಾರಂಭಿಸಿದೆ. ಕಾರಣ, ಪ್ರಜಾಪ್ರಭುತ್ವಕ್ಕೆ ಮಾರಕವಾಗಿರುವ ವಿಕೃತಿಗಳು ಹುಟ್ಟಿಕೊಂಡು ವಿಜೃಂಭಿಸಲಾರಂಭಿಸಿರುವುದು. ಈ ಪೈಕಿ ಮೊದಲನೆಯದು, ಪ್ರಜಾಪ್ರಭುತ್ವದ ಹೆಸರಿನಲ್ಲಿ ದೇಶದ ಆಳುಗ ವ್ಯವಸ್ಥೆಯು ಅತಿಶ್ರೀಮಂತರ ಆಳ್ವಿಕೆಯ 'ಒಲಿಗಾರ್ಕಿ'ಯಾಗಿ (ಅಂದರೆ ಮಿತ-ಜನತಂತ್ರ; ಕೆಲವೇ ಮಂದಿ ಆಡಳಿತ ನಡೆಸುವ ಸರ ಕಾರ) ಬದಲಾಗುತ್ತಿರುವ ಲಕ್ಷಣಗಳು ತೋರಿ ಬಂದಿವೆ. ಗಮನಿಸಿ- ಲೋಕಸಭೆ, ರಾಜ್ಯಸಭೆ, ವಿಧಾನಸಭೆ/ವಿಧಾನ ಪರಿಷತ್ತಿನಂಥ ಜನಪ್ರತಿನಿಧಿ ಸಭೆಗಳಲ್ಲಿ ಇಂದು ತುಂಬಿ ತುಳುಕಾಡುತ್ತಿರುವವರು ಹೆಚ್ಚಾಗಿ ಭಾರಿ ಶ್ರೀಮಂತರು; ಇವರಲ್ಲಿ ಕೌಟುಂಬಿಕವಾಗಿ 'ಕುಬೇರ ಸಿರಿವಂತಿಕೆ'ಯ ಹಿನ್ನೆಲೆಯವರು, ಶ್ರೀಮಂತ ವಕೀಲರು, ಔದ್ಯಮಿಕ ಸಂಸ್ಥೆಗಳೊಂದಿಗೆ ಆಳ ಸಂಬಂಧವಿರುವವರು/ಅವರಿಂದ ಪ್ರಾಯೋಜಿತರಾದವರು, ಕ್ರಿಕೆಟ್ ಅಥವಾ ಸಿನಿಮಾ ತಾರೆಯರು ಹೀಗೆ ಸಮಾಜದ 'ಅತಿ ಮೇಲ್ಪದರದ' ವ್ಯಕ್ತಿಗಳು ಸೇರಿದ್ದಾರೆ. ಕೆಲವೇ ಪಕ್ಷಗಳನ್ನು ಹೊರತು ಪಡಿಸಿದರೆ ಮಿಕ್ಕೆಲ್ಲವೂ ಕುಟುಂಬಗಳ ವೈಯಕ್ತಿಕ ಆಸ್ತಿಗಳು. ಇವು 50-60 ವರ್ಷಗಳಿಂದ ರಾಜಕೀಯದಲ್ಲಿ ಬೀಡುಬಿಟ್ಟು 'ಸಾಕಷ್ಟು ಮಾಡಿಕೊಂಡ' ಕುಟುಂಬಗಳ ಆಸ್ತಿಗಳಾಗಿಬಿಟ್ಟಿವೆ. ಕೆಲವು ಪ್ರಾಂತ್ಯಗಳಲ್ಲಂತೂ ಇವುಗಳದೇ ಪಾರುಪತ್ಯ. ತಂದೆಯ ನಂತರ ತಾಯಿ, ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹೀಗೆ ಚುನಾವಣೆಗಳಲ್ಲಿ ಸ್ಪರ್ಧಿಸುವವರೂ ಈ ಕುಟುಂಬದವರೇ. ಒಂದೇ ಮನೆತನದ 2-3 ಜನ ಅಥವಾ ವಯಸ್ಕರಾದ ಎಲ್ಲರೂ ರಾಜಕೀಯದ ಹುದ್ದೆಗಳಲ್ಲಿ ಮೆರೆಯುತ್ತಿರುವ ಕುಟುಂಬಗಳೂ ಇವೆ. ಒಟ್ಟಾರೆಯಾಗಿ ಇವು 'ಸೂಪರ್ ರಿಚ್' ಕುಟುಂಬಗಳು!

ಈ ಬಾರಿ ಘೋಷಣೆಯಾಗಿರುವ ಅಭ್ಯರ್ಥಿಗಳ ಪಟ್ಟಿಯನ್ನೇ ಒಮ್ಮೆ ನೋಡಿ. ಕರ್ನಾಟಕದಲ್ಲಂತೂ ಅವುಗಳಲ್ಲಿ ಹೆಚ್ಚಾಗಿ ತುಂಬಿಕೊಂಡಿರುವುದು ರಾಜಕಾರಣಿಗಳ ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮಾಜಿ ಹಿರಿಯ ಅಧಿಕಾರಿಗಳು ಅಥವಾ ಅವರ ಕುಟುಂಬಿಕರೇ. ಒಂದೊಮ್ಮೆ ಇಂಥವರು ಲಭ್ಯವಿಲ್ಲದಿದ್ದರೆ, ಬೇರೆ ಬೇರೆ ಅತಿಶ್ರೀಮಂತರು. ಜಾತಿ, ಧರ್ಮ ಅಥವಾ ಒಟ್ಟಾರೆ 'ಗೆಲುವಿನ ಸಾಧ್ಯತೆ' ಪಕ್ಷಗಳ ಪಾಲಿಗೆ ಮಹತ್ವದ ಅಂಶ, ನಿಜ. ಆದರೆ, ಇಂಥ ಅಂಶಗಳನ್ನು ಅವಲಂಬಿಸಿ ಸೀಟು ಸಿಗುವುದು ಕೂಡ ಭಾರಿ ದುಡ್ಡಿನ ಗಂಟು ಇದ್ದವರಿಗೇ!

ಹಾಗೆಂದ ಮಾತ್ರಕ್ಕೆ ಜನರು ಶ್ರೀಮಂತರಾಗುವುದೇ ತಪ್ಪು, ಶ್ರೀಮಂತರು ಚುನಾವಣೆಗೆ ಸ್ಪರ್ಧಿಸಲೇಬಾರದು ಎಂದಲ್ಲ ಅಥವಾ ಶ್ರೀಮಂತರೆಲ್ಲರೂ ಭ್ರಷ್ಟರು-ದುಷ್ಟರು ಎಂದೂ ಅಲ್ಲ. ಶ್ರೀಮಂತರನ್ನು ಬಿಟ್ಟು ಬಡ, ಮಧ್ಯಮ ವರ್ಗದಿಂದ ಬಂದವರು ರಾಜಕೀಯದಲ್ಲಿ ಇಲ್ಲವೇ ಇಲ್ಲ ಎಂದೇನಲ್ಲ. ಮತ್ತೆ ಬಡವರೆಲ್ಲರೂ 'ಅಪ್ಪಂತರು' ಎಂದೂ ಅಲ್ಲ. ಅಥವಾ ಇಂಥ ಪರಿಸ್ಥಿತಿಗೆ ರಾಜಕೀಯ ಪಕ್ಷಗಳು, ರಾಜಕಾರಣಿಗಳು ಮಾತ್ರವೇ ಕಾರಣವೆಂದಲ್ಲ. ಹಲವು ಸಂಕೀರ್ಣ ಸಾಮಾಜಿಕ, ರಾಜಕೀಯ, ಆರ್ಥಿಕ ಕಾರಣಗಳು, ದೇಶದಲ್ಲಿ ಹೆಚ್ಚಿರುವ ಹಣದ ಹರಿವು, ಸಾಮಾಜಿಕ ಮೌಲ್ಯಗಳಲ್ಲಿ ಒಟ್ಟಾರೆಯಾಗಿ ಕಾಣುತ್ತಿರುವ ಅಧಃಪತನ, ಸಂವಿಧಾನ ಮತ್ತು ಕಾನೂನು ವ್ಯವಸ್ಥೆಯಲ್ಲಿನ ನ್ಯೂನತೆಗಳು ಇವೆಲ್ಲ ಸೇರಿ ಈ ಪರಿಸ್ಥಿತಿಯನ್ನು ಸೃಷ್ಟಿಸಿವೆ. ಅದೆಂಥ ಪರಿಸ್ಥಿತಿಯೆಂದರೆ- ಚುನಾವಣೆಗೆ ಸ್ಪರ್ಧಿಸಲು ಕೋಟಿ ಕೋಟಿ ಹಣಬೇಕು, ಇಲ್ಲವಾದಲ್ಲಿ ಗೆಲ್ಲುವುದಿರಲಿ ನಿಲ್ಲುವುದು ಕೂಡ ಸಾಧ್ಯವಿಲ್ಲ ಎಂಬಂಥ ಕಹಿವಾಸ್ತವ. ಸ್ಥಾನಗಳು ಭಾರಿ ಶ್ರೀಮಂತರಿಗೆ ಮೀಸಲಾದಂತೆ ಆಗಿರುವ ಇಂದಿನ ವ್ಯವಸ್ಥೆಯಲ್ಲಿ ಸಾಧಾರಣ ಜನರಿಗೆ ಪ್ರಾತಿನಿಧ್ಯದ ಅವಕಾಶವೇ ಇಲ್ಲ. ಶಾಸಕ, ಸಂಸದ ಸ್ಥಾನಗಳಿಗೆ ಇವರು ಸ್ಪರ್ಧಿಸಲಾಗುವುದಿಲ್ಲ. ಶಿಕ್ಷಕ ಮತದಾರರ ಕ್ಷೇತ್ರ, ಜಿಲ್ಲಾ ಪಂಚಾಯಿತಿ ಇಂಥವು ಕೂಡ ತುಟ್ಟಿಯಾಗಿ ಹೋಗಿವೆ. ಇಲ್ಲೊಂದು ಮಾತು- ನಾಯಕತ್ವದ ಗುಣ, ಬುದ್ಧಿಮತ್ತೆ, ಸೇವಾಸಕ್ತಿಗಳಿದ್ದರೆ ಕುಟುಂಬ ರಾಜಕೀಯ/ಹಣದ ರಾಜಕೀಯವನ್ನೂ ಸ್ವಾಗತಿಸಬಹುದಿತ್ತು. ಆದರೆ, ತಲೆತಿರುಕರು, ಸಂಸ್ಕಾರವಿಹೀನರು, ಬೇಜವಾಬ್ದಾರಿಯ ವ್ಯಕ್ತಿಗಳು ಕೂಡ ಕುಟುಂಬದ ಹಿನ್ನೆಲೆ, ಶ್ರೀಮಂತಿಕೆಯೊಂದನ್ನೇ ಆಧರಿಸಿ ಜವಾಬ್ದಾರಿಯ ಸ್ಥಾನಗಳನ್ನು ಆಕ್ರಮಿಸುತ್ತಿರುವುದೇ ಸಮಸ್ಯೆ ತಂದಿರುವುದು.

ಇನ್ನೂ ಕಳವಳಕಾರಿ ಸಂಗತಿಯೆಂದರೆ, ಪ್ರಗತಿಪರ ರೈತರು, ಐಟಿ ಕ್ಷೇತ್ರದ ನಾಯಕರು, ಶಿಕ್ಷಣವೇತ್ತರು, ಜಲಾನಯನ ತಜ್ಞರು, ನಿವೃತ್ತ ಸೇನಾಧಿಕಾರಿಗಳು, ವಿವಿಧ ಕ್ಷೇತ್ರಗಳಲ್ಲಿ ಅರ್ಥಪೂರ್ಣ ಕೆಲಸ ಮಾಡುತ್ತಿರುವ ಸಾಮಾಜಿಕ ಕಾರ್ಯಕರ್ತರು ಇಂಥವರು ಚುನಾವಣೆಗೆ ಸ್ಪರ್ಧಿಸುವುದಿರಲಿ, ಆ ಕಡೆ ತಲೆಹಾಕಿ ಮಲಗಲೂ ಅನುವು ಮಾಡಿಕೊಡದ ರಾಜಕೀಯ ವ್ಯವಸ್ಥೆಯೊಂದು ಸೃಷ್ಟಿಯಾಗಿಬಿಟ್ಟಿದೆ. ಈ ವ್ಯವಸ್ಥೆ ಹೇಗಿದೆಯೆಂದರೆ, ಟಿಕೆಟ್ ಕೊಡಿಸುವವರನ್ನು ಮತ್ತು ಬೆಂಬಲಿಗರನ್ನು ಬೆಂಗಳೂರಿನಲ್ಲೋ ದೆಹಲಿಯಲ್ಲೋ ರೆಸಾರ್ಟ್‌ಗಳಲ್ಲಿ ಇಟ್ಟುಕೊಂಡು ಖುಷಿಪಡಿಸಿ ನಿಭಾಯಿಸುವ ಶಕ್ತಿ ಟಿಕೆಟ್ ಕೇಳುವವನಿಗೆ ಇರಬೇಕು. ಅಂದರೆ ಇಂಥವರಿಗೆ ಆರಂಭದ ಹೆಜ್ಜೆಗಳಿಗಾಗಿಯೇ ಕೋಟಿ ಕೋಟಿ ದುಡ್ಡು ಬೇಕು. ಇಷ್ಟಾದರೂ ಟಿಕೆಟ್ ಸಿಕ್ಕೇಬಿಡುತ್ತದೆ ಎಂಬ ಖಾತ್ರಿಯಿಲ್ಲ. ಪಕ್ಷಗಳು ಬಹುತೇಕವಾಗಿ ವ್ಯಕ್ತಿಯ ಗೆಲುವಿನ ಸಾಮರ್ಥ್ಯವನ್ನು, ಅಂದರೆ ಜಾತಿಯ ಬೆಂಬಲ, ಸ್ಥಳೀಯ ಧಾರ್ಮಿಕ-ಸಾಮಾಜಿಕ-ಔದ್ಯಮಿಕ-ಆರ್ಥಿಕ ನಾಯಕರ ಬೆಂಬಲ, ಕಾರ್ಮಿಕರ ಒತ್ತಾಸೆ ಇತ್ಯಾದಿಗಳನ್ನು ಅಳೆದುತೂಗುತ್ತವೆ. ಅಲ್ಲಿ ತನ್ನ ಪರವಾಗಿ ಜನಾಭಿಪ್ರಾಯ ಬರುವಂತೆ ಮಾಡಬೇಕಿರುವುದೂ ಅಭ್ಯರ್ಥಿಯ ಕಾರ್ಯತಂತ್ರದ ಭಾಗ. ಇಂಥ ತಂತ್ರಗಳ ಹಿಂದೆ ಏನಿರುತ್ತವೆ ಎಂಬುದು ಹೆಚ್ಚು ಕಡಿಮೆ ಎಲ್ಲರಿಗೂ ಗೊತ್ತಾಗಿಹೋಗಿದೆ.

ಟಿಕೆಟ್ ಸಿಕ್ಕಿತು ಎಂದೇ ಇಟ್ಟುಕೊಳ್ಳಿ. ಮುಂದೆ ಚುನಾವಣಾ ಫಲಿತಾಂಶ ಹೊರಬರುವ ತನಕದ ದಿನಗಳು ಅಭ್ಯರ್ಥಿಯೊಬ್ಬನ ಪಾಲಿಗೆ 'ತಾಕತ್ತಿನ ಪರೀಕ್ಷೆಯ' (ಚಿತ್ರಹಿಂಸೆಯ!) ದಿನಗಳು. ಯಾವ ವ್ಯಕ್ತಿಯನ್ನೂ ಅಭ್ಯರ್ಥಿಯು ಬೇಸರಿಸದೆ ಅವರವರ ಹಂತದಲ್ಲಿ 'ಸಮಾಧಾನಿಸಿ' ಕಳಿಸಬೇಕು. ಹಾಗೆ ಎದುರಿಗೆ ಸಮಾಧಾನಗೊಂಡವನಂತೆ ಕಾಣುವ ವ್ಯಕ್ತಿಯು ಹಿಂದಿನಿಂದ ಅಭ್ಯರ್ಥಿಯ ವಿರುದ್ಧ ಕೆಲಸ ಮಾಡಿದರೂ ಅಚ್ಚರಿಯಿಲ್ಲ, ಕಾರಣ, ಆತ ಹಲವರಿಂದ ಹೀಗೆ 'ಸಮಾಧಾನ' ಪಟ್ಟಿರುವ ಸಾಧ್ಯತೆ ಇರುತ್ತದೆ! ಕೊನೆಯ ದಿನಗಳಲ್ಲಂತೂ ಕೇಳುವುದೇ ಬೇಡ, ಅಭ್ಯರ್ಥಿಯು ನೀರಿನಂತೆ ಹಣವನ್ನು ಹರಿಸಬೇಕಾಗುತ್ತದೆ.

ವಿಷಯ ಇಷ್ಟಕ್ಕೇ ಮುಗಿಯುವುದಿಲ್ಲ, ಆಯ್ಕೆಯಾದ ಎಂಪಿ/ಎಂಎಲ್‌ಎಗಳನ್ನು ತಮ್ಮಲ್ಲೇ ಉಳಿಸಿಕೊಳ್ಳಲು ನಾಯಕನಾದವ ತಂತ್ರಗಾರಿಕೆ ಬಳಸಬೇಕು, ಅಂದರೆ ಹಣ ಪೀಕಬೇಕು. ಇದರ ಪ್ರಮಾಣ ಕೋಟಿಗಳನ್ನು ಮೀರುವುದಿದೆ ಎನ್ನುತ್ತಾರೆ ಬಲ್ಲವರು. ಹೀಗೆ 'ಹಣ ಸುರಿಯುವ' ಶಕ್ತಿ ಮತ್ತು ಧೈರ್ಯ ಬರುವುದು, ಭಾರಿ ಸಂಪತ್ತಿರುವ ಅಥವಾ ಅದನ್ನು ಒದಗಿಸಬಲ್ಲ ಸಂಪರ್ಕ ಹೊಂದಿರುವ ವ್ಯಕ್ತಿಗೆ ಮಾತ್ರವೇ ಇರಬಹುದು. ಚುನಾವಣಾ ಆಯೋಗವೇನೋ ನಿಜಕ್ಕೂ ದಿಟ್ಟಕ್ರಮಗಳನ್ನು ಕೈಗೊಳ್ಳುತ್ತಿದೆ, ದಕ್ಷತೆಯಿಂದ ಕೆಲಸ ಮಾಡುತ್ತಿದೆ. ಆದರೆ ಜನರು ಕೂಡ ಭ್ರಷ್ಟರಾಗಿಬಿಟ್ಟಿರುವುದರಿಂದ ಹಣವು ಗುಪ್ತಗಾಮಿನಿಯಾಗಿ ಹರಿಯುತ್ತದೆ, ಅದನ್ನೆಲ್ಲ ಕಂಡುಹಿಡಿಯುವುದು ಸುಲಭವೇನಲ್ಲ. ಇದೇ ಸಮಸ್ಯೆ.

ಚುನಾವಣಾ ಸಮಯದಲ್ಲಿ ತನ್ನೆಲ್ಲ ಘನತೆ, ಮೌಲ್ಯಗಳನ್ನು ಬದಿಗಿಟ್ಟು ಜೋಕರ್‌ನಂತೆ ಸಾರ್ವಜನಿಕವಾಗಿ ದೊಂಬರಾಟ ನಡೆಸುವ ಅವಶ್ಯಕತೆ ಅಭ್ಯರ್ಥಿಗೆ ಬಂದಿರುವುದು ಮತ್ತೊಂದು ವಿಕೃತಿ. ಇದು ಕೂಡ ಪ್ರಜಾಪ್ರಭುತ್ವವನ್ನು ಅಪಾಯಕ್ಕೆ ತಳ್ಳುವಂಥದ್ದು. ಜನರೊಂದಿಗೆ ಬೆರೆತು ಸರಳವಾಗಿ, ಸಾಮಾನ್ಯನಾಗಿ ಇರುವಂತೆ ತೋರಿಸಿಕೊಳ್ಳಬೇಕಿರುವುದು ಅನಿವಾರ್ಯ ಮತ್ತು ಅದು ಗೆಲ್ಲುವ ತಂತ್ರ ಎಂಬ ಭಾವನೆ ಅಭ್ಯರ್ಥಿಗಳಲ್ಲಿ ಬೇರೂರಿಬಿಟ್ಟಿದೆ. ಹಾಗಾಗಿ, ಕನಿಷ್ಠ ಚುನಾವಣೆ ಮುಗಿಯುವವರೆಗಾದರೂ ಜನರು ಕರೆದಲ್ಲಿಗೆ ಅಭ್ಯರ್ಥಿ ಹೋಗಬೇಕು. ದಿನಪೂರ್ತಿ ಕೈಮುಗಿದುಕೊಂಡೇ ಇರಬೇಕು, ಎದುರಿಗೆ ಕಂಡಕಂಡವರಿಗೆ ಕಾಲಿಗೆ ಬೀಳಬೇಕು. ಎಲ್ಲರೊಂದಿಗೆ ನೆಲದ ಮೇಲೆ ಕುಳಿತು ಬಡಿಸಿದ್ದನ್ನೆಲ್ಲ ಊಟಮಾಡಬೇಕು. ಬಡವರ ಮನೆಯಲ್ಲಿ ಬ್ರೇಕ್‌ಫಾಸ್ಟ್ ಮಾಡಿ ಮಲಗಬೇಕು. ದಾರಿಯಲ್ಲಿ ಜನರೊಂದಿಗೆ ಬೋಂಡಾ-ಚಹಾ ಸೇವಿಸಬೇಕು. 'ನಾನೂ ನಿಮ್ಮವನೇ' ಎಂದು ತೋರಿಸಿಕೊಳ್ಳಲು ಆಯಾ ಜನಾಂಗೀಯರ ಶೈಲಿಯಲ್ಲಿ ರುಮಾಲು, ಪೇಟ, ಮುಂಡಾಸು, ಟೋಪಿ ಇತ್ಯಾದಿ ಧರಿಸಬೇಕು. ಗಣಪತಿ ಹಬ್ಬದಲ್ಲಿ ಜನರೊಂದಿಗೆ ಸೇರಿ ರಸ್ತೆಯಲ್ಲಿ ಕುಣಿಯಬೇಕು, ಕಬಡ್ಡಿ ಆಡಬೇಕು. ಮತ್ತೆ ಯಾರು ಹುಟ್ಟಲಿ ಸಾಯಲಿ, ಅಂಥವರ ಮನೆಗಳಿಗೆಲ್ಲ ಭೇಟಿನೀಡಿ ಖರ್ಚುವೆಚ್ಚ ನೋಡಿಕೊಳ್ಳಬೇಕು; ಕಾರ್ಯಕರ್ತರು ಸತ್ತರೆ ಅವರ ಹೆಣಕ್ಕೆ ಹೆಗಲು ಕೊಡಬೇಕು. ಇವೆಲ್ಲ ಜನಪ್ರತಿನಿಧಿಯೊಬ್ಬನ ಕೆಲಸವಲ್ಲ, ಇವು ಆತನ ಘನತೆಯನ್ನು ಕುಗ್ಗಿಸುತ್ತವೆ ಎಂಬುದನ್ನು ಜನರೂ ಅರ್ಥಮಾಡಿಕೊಳ್ಳುತ್ತಿಲ್ಲ. ಅಭ್ಯರ್ಥಿಗಳಿಗೆ ಇವೆಲ್ಲ ಕೆಲವು ದಿನಗಳವರೆಗಿನ ಅನಿವಾರ್ಯ ಕರ್ಮ, ಆಡಲೇಬೇಕಾದ ನಾಟಕ. ಇಂಥ ಹುಚ್ಚುತನಗಳನ್ನು ತಿದ್ದಿ, ವೈಯಕ್ತಿಕ ಘನತೆಯನ್ನು ಕಾಪಿಟ್ಟುಕೊಳ್ಳುವಂತೆ ಬುದ್ಧಿ ಹೇಳಬಲ್ಲವರಾಗಿದ್ದರು ಮೊರಾರ್ಜಿ ದೇಸಾಯಿ. ಈಗಲೂ ಇಂಥವರು ಇಲ್ಲವೆಂದೇನಲ್ಲ, ಆದರೆ ಕಡಿಮೆ. ಹೀಗಾಗಿ, ಗೌರವಾನ್ವಿತ ಹಿರಿಯರು, ಘನತೆವೆತ್ತ ಸಾಮಾಜಿಕ ಕಾರ್ಯಕರ್ತರು ರಾಜಕೀಯದ ಕಡೆ ತಲೆಹಾಕಿ ಮಲಗಲೂ ಇಚ್ಛಿಸುತ್ತಿಲ್ಲ.

ಇಂಥ ವಿಕೃತಿಗಳಿಂದ ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಗಾಗಿರುವ ಹಾನಿಯನ್ನು ಗಮನಿಸಬೇಕು. ಮುಖ್ಯವಾಗಿ ಇವು ಶಾಸಕಾಂಗದ ಗುಣಮಟ್ಟವನ್ನು ತಗ್ಗಿಸಿವೆ. ಒಂದು ಕಾಲದಲ್ಲಿ ಪ್ರಜ್ಞಾವಂತರು, ಮುತ್ಸದ್ದಿಗಳಿಂದ ತುಂಬಿರುತ್ತಿದ್ದ ನಮ್ಮ ಜನಪ್ರತಿನಿಧಿ ಸಭೆಗಳು ಆ ದೃಷ್ಟಿಯಿಂದ ಇಂದು ಸೊರಗುತ್ತಿವೆ. ಮೌಲ್ಯಯುತ ಚರ್ಚೆಗಳಲ್ಲಿ ತೊಡಗಿಸಿಕೊಳ್ಳಬಲ್ಲವರು ಇಂದು ಕಡಿಮೆ. ಹಿಂದೆ ಕರ್ಪೂರಿ ಠಾಕೂರ್, ಪಿಲೂ ಮೋದಿ, ಇಂದ್ರಜಿತ್ ಗುಪ್ತಾ ಇಂಥವರು ಇದ್ದರು; ಇವರು ಕೆಲವೊಮ್ಮೆ ಪಕ್ಷಬಲವಿಲ್ಲದೆ ಒಬ್ಬರೇ ಕುಳಿತಿರುವಾಗಲೂ ಸರಕಾರಗಳನ್ನು ನಡುಗಿಸಿದ್ದುಂಟು. ಪಿ.ವಿ.ನರಸಿಂಹರಾವ್, ಅಟಲ್ ಬಿಹಾರಿ ವಾಜಪೇಯಿ, ಎಲ್.ಕೆ.ಆಡ್ವಾಣಿ ಮುಂತಾದವರು ಎದ್ದು ನಿಂತರೆ ಸದನವಷ್ಟೇ ಅಲ್ಲ ದೇಶವೇ ಆಲಿಸುತ್ತಿತ್ತು. ಅಂಥವರು ಇಂದು ವಿರಳ. ಏಕೆಂದರೆ, ಪ್ರಜ್ಞಾವಂತರೆನಿಸಿಕೊಂಡವರು ಮೇಲೆ ಉಲ್ಲೇಖಿಸಲಾಗಿರುವ ವಿಕೃತಿಗಳಿಂದಾಗಿ ಜನಪ್ರತಿನಿಧಿಗಳಾಗಲು ಸಾಧ್ಯವೇ ಇಲ್ಲದಂಥ ವ್ಯವಸ್ಥೆ ಸೃಷ್ಟಿಯಾಗಿಬಿಟ್ಟಿದೆ. ಇದು ಪ್ರಜಾಪ್ರಭುತ್ವದ ಪಾಲಿಗೆ ನಿಜಕ್ಕೂ ಅಪಾಯಕಾರಿ.

(ಲೇಖಕರು ನಿವೃತ್ತ ಪ್ರಾಂಶುಪಾಲರು)

ಅಭಿಮತ

ಕೆ.ಎಸ್. ನಾಗರಾಜ್

ಬರಿಯ ಮಾತು ಅಷ್ಟೇ!

ಭಾರತ ದೇಶವನ್ನು ರಕ್ಷಿಸುವಲ್ಲಿ ಮತ್ತು ಪಾಕಿಸ್ತಾನಕ್ಕೆ ಪಾಠ ಕಲಿಸುವಲ್ಲಿ ಕಾಂಗ್ರೆಸ್‌ಗಿರುವ ದಿಟ್ಟತನದ ಮುಂದೆ ಬಿಜೆಪಿಯವರದು ಬರಿಯ ಮಾತಷ್ಟೇ. ಪಾಕಿಸ್ತಾನದ ವಿರುದ್ಧ ಬಿಜೆಪಿಯ ಪಂಚಾಯಿತಿ ಸದಸ್ಯರಿಂದ ಹಿಡಿದು ಪಾರ್ಲಿಮೆಂಟ್ ಸದಸ್ಯರ ತನಕ ಎಲ್ಲರೂ ಆವೇಶದ ಮಾತುಗಳನ್ನಾಡುತ್ತಾರೆ; ಆದರೆ ಪಾಕಿಸ್ತಾನಕ್ಕೆ ಬುದ್ಧಿ ಕಲಿಸುವಂಥ, ಅವರ ಹೀನಕೃತ್ಯಗಳಿಗೆ ಸರಿಯಾಗಿ ಎಚ್ಚರಿಕೆ ನೀಡುವಂಥ ವರ್ತನೆಗಳನ್ನು ಬಿಜೆಪಿಗಿಂತ ಮೊದಲೇ ಕಾಂಗ್ರೆಸ್ ಪಕ್ಷವು ಕಳೆದ 75 ವರ್ಷಗಳಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ಪ್ರದರ್ಶಿಸಿರುವುದಕ್ಕೆ ಹಲವಾರು ಉದಾಹರಣೆಗಳಿವೆ.

1947ರಲ್ಲಿ ದೇಶ ವಿಭಜನೆಯಾದ ಸಂದರ್ಭದಲ್ಲಿ, ಭಾರತದಲ್ಲಿದ್ದ 542ಕ್ಕೂ ಹೆಚ್ಚು ರಾಜರನ್ನು ಮತ್ತು ಅವರ ಸಂಸ್ಥಾನಗಳನ್ನು ಭಾರತದ ಅವಿಭಾಜ್ಯ ಅಂಗವನ್ನಾಗಿಸಿ ಭಾರತದ ಸಮಗ್ರತೆಯನ್ನು ಜಗತ್ತಿಗೆ ಸಾರಿದ್ದು ಸರ್ದಾರ್ ವಲ್ಲಭಭಾಯಿ ಪಟೇಲರು ಮತ್ತು ಕಾಂಗ್ರೆಸ್ ಸರಕಾರ.

1948ರಲ್ಲಿ ಪಾಕಿಸ್ತಾನದ ವಿರುದ್ಧ ಯುದ್ಧ ಮಾಡಿ (ಇದಕ್ಕೆ ಮೊದಲ ಕಾಶ್ಮೀರ ಯುದ್ಧ ಎಂದೂ ಹೆಸರಿದೆ) ಅದಕ್ಕೆ ಮಣ್ಣು ಮುಕ್ಕಿಸಿದ್ದು ನೆಹರುರವರ ಸರಕಾರ; 1965ರಲ್ಲೂ ಲಾಲ್ ಬಹದ್ದೂರ್ ಶಾಸ್ತ್ರಿಯವರ ನೇತೃತ್ವದಲ್ಲಿ ಪಾಕಿಗಳನ್ನು ಹಿಮ್ಮೆಟ್ಟಿಸಿ ಪಾಠ ಕಲಿಸಿದ್ದೂ ಅಂದಿನ ಕಾಂಗ್ರೆಸ್ ಸರಕಾರವೇ. ಅಂದು ಬಿಜೆಪಿಯೂ ಇರಲಿಲ್ಲ, ಮೋದಿಯವರೂ ಇರಲಿಲ್ಲ.

1971ರಲ್ಲಿ ಬಾಂಗ್ಲಾದೇಶದ ರಚನೆಗೆ ಕಾರಣಕರ್ತರಾಗಿ, ಪಾಕಿಸ್ತಾನವನ್ನು ಎರಡು ಭಾಗವಾಗಿ ಸೀಳಿದ ಕೀರ್ತಿ ಕಾಂಗ್ರೆಸ್ ಪಕ್ಷದ್ದು; ತನ್ಮೂಲಕ ಪಾಕಿಸ್ತಾನದ ಹುಟ್ಟಡಗಿಸಿ ದಿಟ್ಟತನ ಪ್ರದರ್ಶಿಸಿದ ಇಂದಿರಾ ಗಾಂಧಿಯವರ ಸಾಹಸದ ಮುಂದೆ ಬೇರೆಯವರ ವಿಚಾರ ಯಾವುದಿದೆ? ಅಮೆರಿಕದ ಅಧ್ಯಕ್ಷರ ಮಾತನ್ನು ಧಿಕ್ಕರಿಸಿ, ಬಾಂಗ್ಲಾದೇಶದ ವಿಮೋಚನೆಗೆ ಪಾಕಿಸ್ತಾನದ ವಿರುದ್ಧ ಯುದ್ಧವನ್ನು ಸಾರಿ, ಒಂದು ಲಕ್ಷಕ್ಕೂ ಹೆಚ್ಚು ಪಾಕಿಸ್ತಾನಿ ಸೈನಿಕರನ್ನು ಸೆರೆಯಾಳಾಗಿಸಿಕೊಂಡು ಅವರ ಅಹಂಕಾರವನ್ನು ಮೆಟ್ಟಿದವರು ಇಂದಿರಾ ಗಾಂಧಿ. ಈ ಕಾರಣಕ್ಕೆ ಸಾಕ್ಷಾತ್ ಅಟಲ್ ಬಿಹಾರಿ ವಾಜಪೇಯಿಯವರಿಂದ ಅವರು 'ದುರ್ಗಾ ಮಾತೆ' ಎಂಬ ಪ್ರಶಂಸೆಗೆ ಪಾತ್ರರಾಗಿದ್ದರು ಎಂಬುದು ನೆನಪಿರಲಿ. ಇಂದಿರಾ ಅವರು 1974ರಲ್ಲಿ ರಾಜಸ್ಥಾನದ ಪೋಖ್ರಾನ್‌ನಲ್ಲಿ ಅಣುಬಾಂಬ್ ಪರೀಕ್ಷೆ ಕೈಗೊಳ್ಳುವ ಮೂಲಕ 'ಭಾರತದ ತಂಟೆಗೆ ಯಾರಾದರೂ ಬಂದರೆ ನಮ್ಮ ಉತ್ತರ ಏನಿರುತ್ತದೆ' ಎಂಬ ಎಚ್ಚರಿಕೆಯ ಸಂದೇಶವನ್ನು ಜಗತ್ತಿಗೆ ರವಾನಿಸಿದರು. ಮಾತ್ರವಲ್ಲ, ಚೀನಾ ದೇಶದ ಠೇಂಕಾರವನ್ನು ಧಿಕ್ಕರಿಸಿ, ಸಿಕ್ಕಿಂ ಅನ್ನು ಭಾರತದ ರಾಜ್ಯವೆಂದು ಘೋಷಿಸಿ 'ಡ್ರ್ಯಾಗನ್'ನ ದುರಹಂಕಾರಕ್ಕೆ ಸರಿಯಾದ ಉತ್ತರ ನೀಡಿದ್ದು ಮತ್ತು ಪಂಜಾಬ್‌ನಲ್ಲಿ ಭಿಂದ್ರನ್‌ವಾಲೆ ಎಂಬ ತೀವ್ರವಾದಿಯನ್ನು ಹತ್ಯೆ ಮಾಡಿ, 'ಬ್ಲೂಸ್ಟಾರ್' ಕಾರ್ಯಾಚರಣೆಯ ಮೂಲಕ ಭಯೋತ್ಪಾದಕರಿಗೆ ಚುರುಕು ಮುಟ್ಟಿಸಿದ್ದು ಇಂದಿರಾ ಗಾಂಧಿಯವರ ನೇತೃತ್ವದ ಕಾಂಗ್ರೆಸ್ ಸರಕಾರವೇ. ಇಂಥ ನಡೆಗಳ ಮೂಲಕ, ದೇಶದ ಭದ್ರತೆ, ಸಮಗ್ರತೆ ಮತ್ತು ಏಕತೆಯ ವಿಷಯಗಳಲ್ಲಿ ರಾಜಿ ಮಾಡಿಕೊಳ್ಳುವುದಿಲ್ಲ ಎಂಬುದನ್ನು ಕಾಂಗ್ರೆಸ್ ಸಾಬೀತುಪಡಿಸಿದೆ. ಇನ್ನು, 2008ರಲ್ಲಿ ಭಾರತದಲ್ಲಿ ಭಯೋತ್ಪಾದಕರ ಚಟುವಟಿಕೆಯನ್ನು ನಿಯಂತ್ರಿಸುವ ಸಲುವಾಗಿ ಮತ್ತು ಇಂಥ ಘಟನೆಗಳ ತನಿಖೆಗಾಗಿ 'ರಾಷ್ಟ್ರೀಯ ತನಿಖಾದಳ' ಎಂಬ ವಿಶೇಷ ಪಡೆಯನ್ನು ರಚಿಸಿದ್ದು ಮತ್ತು ತನ್ಮೂಲಕ ಭಯೋತ್ಪಾದಕರಿಗೆ ಕಠಿಣ ಸಂದೇಶ ನೀಡಿದ್ದು ಮನಮೋಹನ್ ಸಿಂಗ್ ನೇತೃತ್ವದ ಕಾಂಗ್ರೆಸ್ ಸರಕಾರ.

ಇಷ್ಟಾಗಿಯೂ ಬಿಜೆಪಿಯವರು ದೇಶರಕ್ಷಣೆಯಲ್ಲಿ ಎಲ್ಲರಿಗಿಂತ ತಾವೇ ಶಕ್ತಿವಂತರೆಂದು ಹೇಳಿಕೊಳ್ಳುತ್ತಾರೆ; ಆದರೆ, ಸಂಸತ್ತಿನ ಮೇಲೆ ಭಯೋತ್ಪಾದಕರ ದಾಳಿಯಾಗಿದ್ದು ಕೇಂದ್ರದಲ್ಲಿ ಬಿಜೆಪಿ ಅಧಿಕಾರದಲ್ಲಿದ್ದಾಗ ಹಾಗೂ ಭಯೋತ್ಪಾದಕರನ್ನು ವಿಮಾನದಲ್ಲಿ ಕಂದಹಾರ್ ಪ್ರದೇಶಕ್ಕೆ ಬಿಟ್ಟುಬಂದವರು ಕೇಂದ್ರ ಬಿಜೆಪಿ ಸರಕಾರದ ಮಂತ್ರಿಗಳು ಎಂಬುದನ್ನು ಇವರು ಮರೆತುಬಿಡುತ್ತಾರೆ! ಇನ್ನು ಪುಲ್ವಾಮಾ ದಾಳಿಯಲ್ಲಿ ಭಾರತದ 40ಕ್ಕೂ ಹೆಚ್ಚು ಸೈನಿಕರು ಪ್ರಾಣ ಕಳೆದುಕೊಂಡಿದ್ದು ಆಂತರಿಕ ಭದ್ರತಾ ವೈಫಲ್ಯದ ಕಾರಣದಿಂದ; ಈ ಘಟನೆ ನಡೆದಿದ್ದು ಕೂಡ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರಕಾರದ ಅವಧಿಯಲ್ಲಿ. ಇತ್ತೀಚೆಗೆ ಸಂಸತ್ ಭವನದೊಳಗೆ ಪ್ರವೇಶಿಸಿದ ಕೆಲವರು ಹೊಗೆ ಬಾಂಬ್‌ನಿಂದ ಆತಂಕದ ವಾತಾವರಣವನ್ನು ನಿರ್ಮಿಸಿದ ಘಟನೆ ನಡೆದಿದ್ದೂ ಬಿಜೆಪಿಯವರ ಅಧಿಕಾರಾವಧಿಯಲ್ಲೇ.

ಜಮ್ಮು ಮತ್ತು ಕಾಶ್ಮೀರವು 1947ರಲ್ಲಿಯೇ ಭಾರತದ ಅವಿಭಾಜ್ಯ ಅಂಗವಾಗಿತ್ತು. ಅಂದಿನ ರಾಜ ಹರಿಸಿಂಗರ ಮನವಿಯ ಮೇರೆಗೆ ಅಂದಿನ ಪರಿಸ್ಥಿತಿಗೆ ಅನುಗುಣವಾಗಿ ಕೆಲವು ರಿಯಾಯಿತಿಗಳನ್ನು ನೀಡಲಾಗಿತ್ತು. ಆದರೆ ಬಿಜೆಪಿಯವರು 'ಸಂವಿಧಾನದ 370ನೇ ವಿಧಿಯನ್ನು ರದ್ದುಮಾಡುವುದರ ಮೂಲಕ ನಾವು ಜಮ್ಮು-ಕಾಶ್ಮೀರವನ್ನು ಭಾರತದ ಭಾಗವನ್ನಾಗಿ ಸೇರಿಸಿಕೊಂಡೆವು' ಎಂಬ ರೀತಿಯಲ್ಲಿ ಸುಳ್ಳುಗಳನ್ನು ಹೇಳುತ್ತಾ, ಜನರನ್ನು ನಂಬಿಸುವ ದಾರಿಯಲ್ಲಿ ಸಾಗಿದ್ದಾರೆ. ನೆಹರುರವರಿಂದ ಮನಮೋಹನ್ ಸಿಂಗ್‌ರವರೆಗೆ 'ಜಮ್ಮು-ಕಾಶ್ಮೀರ ಭಾರತದ ಅವಿಭಾಜ್ಯ ಅಂಗ' ಎಂಬ ನಿಲುವನ್ನು ವಿವಿಧ ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಗಟ್ಟಿಯಾಗಿ ಹೇಳಲಾಗಿದೆ. ಮಾತ್ರವಲ್ಲ, ಈ ವಿಚಾರದಲ್ಲಿ ಯಾವುದೇ ಮೂರನೇ ವ್ಯಕ್ತಿಯ ಮಧ್ಯಸ್ಥಿಕೆಯ ಅವಶ್ಯಕತೆ ಇಲ್ಲವೆಂದು ಹೇಳುವ ಮೂಲಕ, ಭಾರತದ ವಿಚಾರದಲ್ಲಿ ಯಾರೂ ಮಧ್ಯಪ್ರವೇಶಿಸಬಾರದು ಎಂಬ ಪರೋಕ್ಷ ಸಂದೇಶವನ್ನು ಸಾರಿ ಆಗಿದೆ.

1962ರಲ್ಲಿ ಚೀನಾ ದೇಶವು ಭಾರತದ ಮೇಲೆ ಮೋಸದಿಂದ ಯುದ್ಧವನ್ನು ಸಾರಿತು; ಅಂದು ದೇಶದ ಸೈನಿಕರಿಗೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಲು ದೇಶದ ಆರ್ಥಿಕ ಪರಿಸ್ಥಿತಿ ಸದೃಢವಾಗಿರಲಿಲ್ಲ. ಕಾರಣ, ಸ್ವಾತಂತ್ರ್ಯ ಬಂದು ಕೇವಲ 15 ವರ್ಷಗಳಾಗಿದ್ದವು. ಇಂಥ ಸಂದರ್ಭದಲ್ಲಿ ಸೈನಿಕರ ನಿಧಿಗಾಗಿ ಕರೆನೀಡಿ, ದೇಶದ ಪ್ರತಿಯೊಬ್ಬ ನಾಗರಿಕರ ಉದಾರ ನೆರವಿನಿಂದ ಸೈನಿಕರಿಗೆ ವಿಶೇಷ ಸೌಲಭ್ಯಗಳನ್ನು ಕಲ್ಪಿಸಲಾಯಿತು.

ಇಂಥ ಹಲವಾರು ವಿಚಾರಗಳು ಜನರಿಗೆ ನೆನಪಿಲ್ಲವೆಂಬ ಭಾವನೆಯಲ್ಲಿ ಬಿಜೆಪಿಯು, ಪಾಕಿಸ್ತಾನದ ವಿರುದ್ಧ ಯುದ್ಧ ಮಾಡದೆ ಮತ್ತು ಚೀನಾ ದೇಶವು ಭಾರತದ ಕೆಲ ಪ್ರದೇಶಗಳನ್ನು ಆಕ್ರಮಿಸಿಕೊಂಡಿದ್ದರೂ ಅವರಿಗೆ ತಕ್ಕ ಪ್ರತ್ಯುತ್ತರ ಹೇಳದೆ, ತಾನು ಮಾತ್ರವೇ ದೇಶಭಕ್ತ ಎಂಬಂತೆ ಬಿಂಬಿಸಿಕೊಳ್ಳುತ್ತಿದೆ ಹಾಗೂ ತಾನಿಲ್ಲದಿದ್ದರೆ ದೇಶದ ರಕ್ಷಣೆಗೆ ಸಂಚಕಾರ ಒದಗಿಬಿಡುತ್ತದೆ ಎಂಬ ರೀತಿಯಲ್ಲಿ ಪ್ರಚಾರ ಪಡೆದುಕೊಳ್ಳುತ್ತಿದೆ.

ದೇಶದ ಪ್ರತಿಯೊಬ್ಬ ನಾಗರಿಕರು ಮತ್ತು ಹಗಲಿರುಳೆನ್ನದೆ ದೇಶ ಕಾಯುವ ಸಿಪಾಯಿಗಳು ಭಾರತದ ರಕ್ಷಣೆಗೆ ದುಡಿಯುತ್ತಿರುವವರೇ; ದೇಶದ ಏಕತೆ ಮತ್ತು ಭದ್ರತೆಯ ವಿಷಯ ಬಂದಾಗ ಪ್ರತಿಯೊಬ್ಬ ಭಾರತೀಯರೂ ಒಗ್ಗಟ್ಟಾಗಿ ದೇಶದ ರಕ್ಷಣೆಗೆ ನಿಲ್ಲುತ್ತಾರೆ. ದೇಶಪ್ರೇಮ ಮತ್ತು ದೇಶಸೇವೆ ಯಾವೊಂದು ಪಕ್ಷದ ಆಸ್ತಿಗಳೂ ಅಲ್ಲ, ಅವು ಪ್ರತಿಯೊಬ್ಬ ಭಾರತೀಯರ ಕಣಕಣದಲ್ಲಿವೆ.

(ಲೇಖಕರು ಹವ್ಯಾಸಿ ಬರಹಗಾರರು)

ಕೇಂದ್ರದೊಂದಿಗೆ ಬಡಿದಾಟಕ್ಕಿಂತ ಸಮನ್ವಯ ಇರಲಿ

ಗಂಟಾಘೋಷ
ಗುರುರಾಜ್ ಗಂಟಿಹೊಳೆ
vveditoped@gmail.com

ಮೋದಿ ನೇತೃತ್ವದ ಕೇಂದ್ರ ಸರಕಾರವು ತಾರತಮ್ಯ ಧೋರಣೆಯನ್ನು ಅನುಸರಿಸುತ್ತಿದೆ. ನಮಗೆ ಸೇರಬೇಕಾದ ಅನುದಾನ, ಬರ ಪರಿಹಾರದ ಹಣವನ್ನು ಸಕಾಲಕ್ಕೆ ಕೊಡುತ್ತಿಲ್ಲ ಎಂದು ದಿನಪತ್ರಿಕೆಗಳಲ್ಲಿ ಜಾಹೀರಾತು ನೀಡಿ, ರಾಜ್ಯ ಕಾಂಗ್ರೆಸ್ ಸರಕಾರದ ಎಲ್ಲ ಮಹಾರಥಿಗಳು ಮರುದಿನ ದಿಲ್ಲಿಯಲ್ಲಿ ಸೇರಿ ಪ್ರತಿಭಟಿಸಿದ್ದು ದೇಶಾದ್ಯಂತ ಸುದ್ದಿಯಾಯಿತು. ಈಗ ಕೇಂದ್ರದ ನಡೆಯನ್ನು ಪ್ರಶ್ನಿಸಿ ರಾಜ್ಯ ಸರಕಾರವು ಸುಪ್ರೀಂ ಕೋರ್ಟ್‌ನ ಮೊರೆಹೋಗಿದ್ದೂ ಆಗಿದೆ.

ಶ್ರೀಸಾಮಾನ್ಯರು ಕಷ್ಟಪಟ್ಟು ದುಡಿದು ತೆರಿಗೆ ಕಟ್ಟುವುದಲ್ಲದೆ, ಇಂದಿನ ದುಬಾರಿ ದುನಿಯಾದಲ್ಲಿ ಸಂಸಾರದ ಹಲವು ಬಾಬತ್ತುಗಳನ್ನು ನಿಭಾಯಿಸಬೇಕಾಗಿ ಬಂದಿರುವ ಇಂದಿನ ಪರಿಸ್ಥಿತಿಯಲ್ಲಿ, ಜನಸಾಮಾನ್ಯರ ಹಿತಕಾಯಬೇಕಾದವರು ಆರ್ಥಿಕತೆಯ ವಿಚಾರದಲ್ಲೂ ರಾಜಕೀಯ ಮಾಡುತ್ತ ಜನರನ್ನು ದಾರಿ ತಪ್ಪಿಸುತ್ತಿರುವುದು ದುರಂತ. ಜನರೂ ಅಷ್ಟೇ, ಬಹಳ ಬೇಗ ರಾಜಕೀಯ ದಾಳಗಳಿಗೆ ಬಲಿಯಾಗಿ, ಕೆಲ ಸಂದರ್ಭಗಳಲ್ಲಿ ಅತಿರೇಕವಾಗಿ ವರ್ತಿಸಿಬಿಡುತ್ತಾರೆ. ಸಾಮರಸ್ಯ, ಭಾವೈಕ್ಯತೆ, ಸಮುದಾಯ ಹೊಂದಾಣಿಕೆ ಇವು ನಮ್ಮ ಸಾಮಾಜಿಕ ವ್ಯವಸ್ಥೆಗಳ ಮೂಲ ಅಂಶಗಳು ಎಂಬುದನ್ನು ಅರಿಯದೆ, ಬೆರಳ ತುದಿಯಲ್ಲೇ ಮನಬಂದಂತೆ ಕಮೆಂಟಿಸುವ ಇಂದಿನ ಯುವಜನರಿಗೂ ಒಂದಷ್ಟು ತಿಳಿವಳಿಕೆ ನೀಡಬೇಕಿದೆ.

ಹೀಗೆ ದಿಲ್ಲಿಗೆ ತೆರಳಿದವರು ಕೇಳಿದ ಎರಡು ಪ್ರಮುಖ ಪ್ರಶ್ನೆಗಳೆಂದರೆ, ಕೇಂದ್ರದಿಂದ ಕರ್ನಾಟಕಕ್ಕೆ ಯಾವುದೇ ಪರಿಹಾರ ಬಂದಿಲ್ಲ ಎಂಬುದು. ಎರಡನೆಯದಾಗಿ, ರಾಜ್ಯಕ್ಕೆ ವಿಶೇಷ ಅನುದಾನ ನೀಡಿಲ್ಲ ಎಂಬುದು. ಹಣಕಾಸಿನ ಸೂಕ್ಷ್ಮ ಲೆಕ್ಕಾಚಾರಗಳು ಸಾಮಾನ್ಯರಿಗೆ ತಿಳಿಯದು. ತಿಳಿದವರು ಪ್ರಶ್ನಿಸಿದರೆ, 'ನೀನು ಬಿಜೆಪಿ ಏಜೆಂಟಾ?' ಎಂದು ಹೇಳಿ ಬಾಯಿ ಮುಚ್ಚಿಸುತ್ತಾರೆ. ಹೀಗಾಗಿ, ಈ ಬರ ಪರಿಹಾರ, ವಿಶೇಷ ಅನುದಾನ ಇತ್ಯಾದಿ ಅಂಶಗಳನ್ನು ಸುತ್ತುವರಿದಿರುವ ಸಂಗತಿಗಳತ್ತ ಕೊಂಚ ಗಮನ ಹರಿಸೋಣ.

'ನ್ಯಾಷನಲ್ ಡಿಸಾಸ್ಟರ್ ರೆಸ್ಪಾನ್ಸ್ ಫೋರ್ಸ್' (ಎನ್‌ಡಿಆರ್‌ಎಫ್) ಎಂಬುದು ರಾಷ್ಟ್ರೀಯ ವಿಪತ್ತು ನಿರ್ವಹಣೆ ಕಾಯ್ದೆ, 2005ರ ಅಡಿ ಸಂವಿಧಾನಾತ್ಮಕವಾಗಿ ಹುಟ್ಟುಹಾಕಲಾದ ಸಂಸ್ಥೆಯಾಗಿದ್ದು, ಇದು ದೇಶದ ಯಾವುದೇ ಸ್ಥಳದಲ್ಲಿ ಪ್ರಾಕೃತಿಕ ವಿಪತ್ತು ಸೇರಿದಂತೆ ಎಂಥದೇ ತುರ್ತುಪರಿಸ್ಥಿತಿಯನ್ನು ನಿಭಾಯಿಸಲು ಸದಾ ಸಿದ್ಧವಾಗಿರುತ್ತದೆ.

ಈ ಸಂಸ್ಥೆಯು ತನ್ನದೇ ಆದ ನೀತಿ-ನಿಯಮಗಳ/ಕಾರ್ಯವಿಧಾನಗಳ ಮೂಲಕ ಕೆಲಸ ಮಾಡುತ್ತದೆ. ಅವೆಂದರೆ:

1) ರಾಜ್ಯ ಸರಕಾರವು ಒಂದು ಮೌಲ್ಯಮಾಪನ ತಯಾರು ಮಾಡಿ ಎನ್‌ಡಿಆರ್‌ಎಫ್/ಎಸ್‌ಡಿಆರ್‌ಎಫ್‌ಗೆ ತಲುಪಿಸಬೇಕು.

2) ಪ್ರಾಥಮಿಕ ಸಮೀಕ್ಷೆ ಮುಗಿದ ನಂತರ ಈ ಸಂಸ್ಥೆಯ ಪ್ರಮುಖ ಅಧಿಕಾರಿಗಳು ಸ್ಥಳಕ್ಕೆ ಆಗಮಿಸಿ, ರಾಜ್ಯ ಸರಕಾರ ಕೊಟ್ಟ ಮಾಹಿತಿ, ವಾಸ್ತವಿಕ ವಿಚಾರ ಹಾಗೂ ಸ್ಥಳೀಯರ ಕಷ್ಟಗಳನ್ನು ಆಲಿಸಿ, ಎಲ್ಲವನ್ನೂ ಸೇರಿಸಿ ಒಂದು ಸಮಗ್ರ ವರದಿ ತಯಾರಿಸಿ, ಎಸ್‌ಡಿಆರ್‌ಎಫ್ ಮೂಲಕ ಹಂತ-ಹಂತವಾಗಿ ಹಣವನ್ನು ಬಿಡುಗಡೆ ಮಾಡುತ್ತಾ ಹೋಗುತ್ತಾರೆ.

3) ಇದಕ್ಕೆಂದೇ ನ್ಯಾಷನಲ್ ಎಕ್ಸಿಕ್ಯುಟಿವ್ ಕಮಿಟಿಯು (ಎನ್‌ಇಸಿ) ಸಂವಿಧಾನದ ನಿಯಮ-5, 2005ರ ಅಡಿಯಲ್ಲಿ ರೂಪುಗೊಂಡಿರುತ್ತದೆ. ಯಾವುದೇ ವಿಪತ್ತನ್ನು ಸಕಾಲದಲ್ಲಿ ಸಮರ್ಪಕವಾಗಿ ನಿಭಾಯಿಸಿ ನಿರ್ವಹಿಸುವಲ್ಲಿ ಈ ತಂಡವು ಎಳ್ಳಷ್ಟೂ ತಡಮಾಡದು.

4) ಎನ್‌ಇಸಿಯ ಈ ವರದಿಯನ್ನು ಆಧರಿಸಿ, ಉನ್ನತ ಮಟ್ಟದ ಸಮಿತಿಯು ತತ್‌ಕ್ಷಣ ಅಷ್ಟೂ ಹಣವನ್ನು ಬಿಡುಗಡೆ ಮಾಡುತ್ತದೆ (ಈ ಸಮಿತಿಯಲ್ಲಿ ಕೇಂದ್ರ ಹಣಕಾಸು ಸಚಿವರು, ಕೇಂದ್ರ ಗೃಹ ಮಂತ್ರಿಗಳು, ಕೇಂದ್ರ ಕೃಷಿ ಮಂತ್ರಿಗಳು ಹಾಗೂ ನೀತಿ ಆಯೋಗದ ಉಪಾಧ್ಯಕ್ಷರು, ಸದಸ್ಯರು ಜತೆಗೆ ಎನ್‌ಇಸಿಯ ತಂಡದವರು ಇರುತ್ತಾರೆ). ಇದು 2005ರಿಂದಲೂ ಸಂವಿಧಾನಾತ್ಮಕವಾಗಿ ನಡೆದುಕೊಂಡು ಬಂದಿರುವ ವಿಧಾನ.

ವಾಸ್ತವ ಹೀಗಿರುವಾಗ, ದೇಶದ ಯಾವುದೇ ರಾಜ್ಯದ/ಸ್ಥಳದ ಸಮಸ್ಯೆಯನ್ನು ತನ್ನದೇ ಸಮಸ್ಯೆಯೆಂಬಂತೆ ಪರಿಗಣಿಸಿ, ಅದರ ಪರಿಹಾರಕ್ಕೆ ಶರವೇಗದಲ್ಲಿ ಧಾವಿಸಿ ಬರುವ ಸಂಸ್ಥೆಯ ಕುರಿತೇ ಆಪಾದನೆ ಮಾಡುತ್ತಿರುವ ರಾಜ್ಯ ಕಾಂಗ್ರೆಸ್ ಸರಕಾರವು, ಸರಿಯಾದ ವಿಧಾನದಲ್ಲಿ ಅರ್ಜಿ ಸಲ್ಲಿಸಿ, ಪರಿಣತರಿಂದ ಅನಾವೃಷ್ಟಿಯ ಮೌಲ್ಯಮಾಪನ ನಡೆಸಿ ಸಂಸ್ಥೆಗೆ ಸಲ್ಲಿಸಿದ್ದಿದ್ದರೆ, ಕೇಂದ್ರ ಸರಕಾರವನ್ನು ದೂರುವ ಪ್ರಮೇಯವೇ ಬರುತ್ತಿರಲಿಲ್ಲ. ರಾಜ್ಯ ಸರಕಾರವು ಈ ಒಂದು ಚಿಕ್ಕ ಮತ್ತು ಸರಳ ಪ್ರಕ್ರಿಯೆಯನ್ನು ಅನುಸರಿಸುವುದು ಬಿಟ್ಟು, ರಾಜ್ಯದಿಂದ ಆಯ್ಕೆಯಾಗಿರುವ ಸಂಸದರನ್ನು ಮತ್ತು ಕೇಂದ್ರ ಹಣಕಾಸು ಸಚಿವರನ್ನು ದೂಷಿಸಿದರೆ ಎನ್‌ಡಿಆರ್‌ಎಫ್ ತಲೆ ಕೆಡಿಸಿಕೊಳ್ಳುವುದಿಲ್ಲ. ಇದನ್ನೇ ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು, 'ಒಂದು ಆಳುವ ಸರಕಾರವು ಇಷ್ಟು ವಿವೇಚನಾರಹಿತವಾಗಿ ನಡೆದುಕೊಳ್ಳುತ್ತಿರುವುದು ಮತ್ತು ಸುಳ್ಳು ಹೇಳುತ್ತಿರುವುದು ಇದೇ ಮೊದಲು. ವಿಪತ್ತು ನಿರ್ವಹಣೆ ಮತ್ತು ಬಂಡವಾಳ ಹೂಡಿಕೆ ಎರಡನ್ನೂ ಸೇರಿಸಿ ಕೇಂದ್ರದಿಂದ ರಾಜ್ಯಕ್ಕೆ ಒಟ್ಟು 12,476 ಕೋಟಿ ರು. ಹಣವನ್ನು ಈಗಾಗಲೇ ನೀಡಿ ಆಗಿದೆ. ವಿತ್ತೀಯ ಶಿಸ್ತು ಪಾಲಿಸದ ರಾಜ್ಯ ಕಾಂಗ್ರೆಸ್ ಸರಕಾರವು ಬೇಕಾಬಿಟ್ಟಿಯಾಗಿ ಘೋಷಿಸಿದ ಗ್ಯಾರಂಟಿಗಳಿಗೆ ಹಣ ಹೊಂದಿಸಲು ಪರದಾಡುತ್ತಿದ್ದು, ಇದನ್ನು ಮುಚ್ಚಿಡಲು ಕೇಂದ್ರದ ಮೇಲೆ ಗೂಬೆ ಕೂರಿಸುತ್ತಿದೆ. ಈ ವಿಚಾರದಲ್ಲಿ ನಾವು ಜನರೊಂದಿಗೆ ರಾಜಕೀಯ ಮಾಡಲು ಹೋಗುವುದಿಲ್ಲ, ಇದನ್ನು ಅವರು ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದಾರೆ. ಹಾಗಾಗಿ, ಈ ಸಂಬಂಧದ ಎಲ್ಲ ದಾಖಲೆಗಳನ್ನೂ ನಾನು ಸಲ್ಲಿಸುತ್ತೇನೆ. ನ್ಯಾಯಾಲಯವೇ ಇದನ್ನು ತೀರ್ಮಾನಿಸಲಿ' ಎಂದು ರಾಜ್ಯದಲ್ಲಿ ಭಾನುವಾರ ನಡೆದ ಖಾಸಗಿ ಸಂಸ್ಥೆಯೊಂದರ ಕಾರ್ಯಕ್ರಮದಲ್ಲಿ ಭಾಗಿಯಾದ ಸಂದರ್ಭದಲ್ಲಿ ಹೇಳಿದ್ದಾರೆ.

ಇನ್ನು, ಹಣಕಾಸು ಆಯೋಗ ಶಿಫಾರಸು ಮಾಡಿರುವ ಅನುದಾನವನ್ನು ನೀಡಿಲ್ಲ ಎಂಬುದು ರಾಜ್ಯ ಕಾಂಗ್ರೆಸ್ ಸರಕಾರದ ಎರಡನೇ ಪ್ರಮುಖ ಆರೋಪ. ಇದಕ್ಕೆ ಖಾರವಾಗಿಯೇ ಪ್ರತಿಕ್ರಿಯಿಸಿರುವ ವಿತ್ತ ಸಚಿವೆ, 'ರಾಜ್ಯಕ್ಕೆ ಸಿಗಬೇಕಾದ ಪ್ರತಿ ಪೈಸೆಯನ್ನೂ ಸಕಾಲದಲ್ಲಿ ಬಿಡುಗಡೆ ಮಾಡಲಾಗಿದೆ. ಕಾಂಗ್ರೆಸ್ ಸರಕಾರಕ್ಕಿಂತ ನಮ್ಮ ಕಾಲದಲ್ಲಿ ರಾಜ್ಯದ ತೆರಿಗೆಯು ಶೇ.250ರಷ್ಟು ಏರಿಕೆಯಾಗಿದೆ. ಕಳೆದ 10 ವರ್ಷಗಳಿಗೆ ಹೋಲಿಸಿದರೆ ಮೂರೂವರೆ ಪಟ್ಟು ಹೆಚ್ಚಾಗಿದೆ. ಹಾಗೆಯೇ ಹಣಕಾಸು ಆಯೋಗದ ಅನುದಾನದಲ್ಲಿಯೂ ಶೇ.270ರಷ್ಟು ಏರಿಕೆಯಾಗಿದೆ. 15ನೇ ಹಣಕಾಸು ಆಯೋಗದ ವರದಿಯ ಪ್ರಕಾರವೇ ಗಮನಿಸುವುದಾದರೆ, 2004ರಿಂದ 2014ರವರೆಗೆ 60,779 ಕೋಟಿ ರು. ಗಳಷ್ಟಿದ್ದರೆ, 2014ರಿಂದ 2024ರವರೆಗೆ 2,26,832 ಕೋಟಿ ರು.ನಷ್ಟಿದೆ. ಇದರೊಟ್ಟಿಗೆ, 2017ರಿಂದ 2022ರವರೆಗಿನ ಜಿಎಸ್‌ಟಿ ಪಾಲನ್ನು ಸಂಪೂರ್ಣ ಬಿಡುಗಡೆ ಮಾಡಲಾಗಿದೆ. ಜತೆಗೆ, 2024ರ ಮಾರ್ಚ್‌ವರೆಗಿನ ಜಿಎಸ್‌ಟಿ ಪರಿಹಾರದ ಬಾಕಿಯನ್ನೂ ಬಿಡುಗಡೆ ಮಾಡಿದೆ' ಎಂದಿದ್ದಾರೆ.

ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ, 2019ರಿಂದ 2022ರ ನಡುವೆ ತೀವ್ರ ಬೆಳೆಹಾನಿ ಸಂಭವಿಸಿದಾಗ, ನಾಲ್ಕು ಹಂತಗಳಲ್ಲಿ ಒಟ್ಟಾರೆ 6,952 ಕೋಟಿ ರು. ಹಣವನ್ನು ತಕ್ಷಣವೇ ಫಲಾನುಭವಿಗಳಿಗೆ ಪರಿಹಾರವಾಗಿ ರಾಜ್ಯ ಬಿಜೆಪಿ ಸರಕಾರ ನೀಡಿತ್ತು ಎಂಬುದನ್ನು ಈ ಸಂದರ್ಭದಲ್ಲಿ ಸ್ಮರಿಸಬಹುದು.

ಇನ್ನು, ಕೇಂದ್ರ ಹಣಕಾಸು ಆಯೋಗದ ಕುರಿತು ಗಮನಿಸುವುದಾದರೆ, ಭಾರತ ಸಂವಿಧಾನದ 280ನೇ ವಿಧಿಯ ಅನ್ವಯ ನಮ್ಮ ರಾಷ್ಟ್ರಪತಿಗಳು 5 ವರ್ಷದ ಅವಧಿಗೆ ಕೇಂದ್ರ ಮತ್ತು ರಾಜ್ಯಗಳ ನಡುವಿನ ಅನುದಾನ ಹಂಚಿಕೆಗೆ ಸಂಬಂಧಿಸಿದಂತೆ ಶಿಫಾರಸು ನೀಡಲು ಈ ಆಯೋಗವನ್ನು ನೇಮಕ ಮಾಡಿರುತ್ತಾರೆ. ಮುಖ್ಯವಾಗಿ, ಕೇಂದ್ರ ಮತ್ತು ರಾಜ್ಯಗಳ ನಡುವೆ ತೆರಿಗೆ ಆದಾಯವನ್ನು ವಿತರಿಸಲು ಶಿಫಾರಸು ನೀಡುವುದು ಇದರ ಕಾರ್ಯವ್ಯಾಪ್ತಿ. ಈ ಹಿಂದೆ 2015ರಿಂದ 2020ರವರೆಗೆ 14ನೇ ಹಣಕಾಸು ಆಯೋಗವು ರಚಿತವಾದಾಗ, ಅದರ ಸಮಿತಿಯಲ್ಲಿ ಇದೇ ಕಾಂಗ್ರೆಸ್ ನಾಯಕರು ಮುಗುಮ್ಮಾಗಿ ಕುಳಿತಿದ್ದರು. ವಿವಿಧ ರಾಜ್ಯಗಳಿಗೆ ವಿಷಯವಾರು ಹಂಚಿಕೆಗಳನ್ನು ಶೇಕಡಾವಾರು ಹಂಚಿಕೆ ಮಾಡಿ ಆಯೋಗವು ತನ್ನ ವರದಿ ಸಲ್ಲಿಸಿತು ಕೂಡ. ನಂತರದಲ್ಲಿ, ರಚನೆಯಾದ 15ನೇ ಹಣಕಾಸು ಆಯೋಗದ ಶಿಫಾರಸುಗಳಲ್ಲಿ, ಕೇಂದ್ರದ ತೆರಿಗೆಗಳಲ್ಲಿ ರಾಜ್ಯಗಳ ಪಾಲನ್ನು 2015-2020ರ ಅವಧಿಯಲ್ಲಿದ್ದ ಶೇ.42ರಷ್ಟು ಪಾಲನ್ನು 2020-21ಕ್ಕೆ ಶೇ.41ಕ್ಕೆ ಇಳಿಸಲು ಸೂಚಿಸಲಾಗಿದೆ.

ಈ ಒಂದು ಇಳಿಕೆಯಿಂದ ಬರುವ ಶೇ.1ರಷ್ಟು ಪಾಲನ್ನು ಹೊಸದಾಗಿ ರಚನೆಯಾದ ಕೇಂದ್ರಾಡಳಿತ ಪ್ರದೇಶಗಳಾದ ಜಮ್ಮು ಮತ್ತು ಕಾಶ್ಮೀರ ಹಾಗೂ ಲಡಾಖ್‌ಗೆ ಕೇಂದ್ರ ಸರಕಾರದ ಸಂಪನ್ಮೂಲಗಳಿಂದ ಒದಗಿಸುವುದು ಎಂದು ತನ್ನ ವಿಸ್ತೃತ ವರದಿಯಲ್ಲಿ, ವಿಕಾಸವಾಗಬೇಕಾದ ಯೋಜನಾ ಮಾದರಿಯನ್ನು ಗಮನದಲ್ಲಿಟ್ಟುಕೊಂಡು ಸಲ್ಲಿಸಿರುವುದು ಕಂಡುಬರುತ್ತದೆ. ವಾಸ್ತವ ಹೀಗಿರುವಾಗ, ಇನ್ನೂ ಮುಂದುವರಿದ ರಾಜ್ಯ ಕಾಂಗ್ರೆಸ್ ಸರಕಾರವು ಸರ್ವೋಚ್ಚ ನ್ಯಾಯಾಲಯದಲ್ಲಿ ಕೇಂದ್ರ ಸರಕು ಮತ್ತು ಸೇವಾ ಕಾಯ್ದೆ, 2017ರ (ಸಿಜಿಎಸ್‌ಟಿ) ಪರಿಚ್ಛೇದ 32ರ ಅಡಿಯಲ್ಲಿ ದೂರು ದಾಖಲಿಸಿದೆ. ಅಷ್ಟಕ್ಕೂ ಈ ಪರಿಚ್ಛೇದವು ಇರುವುದು ಅನಧಿಕೃತ ತೆರಿಗೆ ಸಂಗ್ರಹದ ನಿಷೇಧದ ಕಾರಣಕ್ಕೆ. ಅದರ ಒಂದೆರಡು ನಿಯಮಾವಳಿ ಹೀಗಿವೆ:

1) ನೋಂದಾಯಿತರಲ್ಲದ ವ್ಯಕ್ತಿಯು ಈ ಅಧಿನಿಯಮದ ಅಡಿಯಲ್ಲಿ ತೆರಿಗೆಯ ಮೂಲಕ ಯಾವುದೇ ಸರಕು ಅಥವಾ ಸೇವೆಗಳ ಪೂರೈಕೆಯಲ್ಲಿ ಯಾವುದೇ ಮೊತ್ತವನ್ನು ಸಂಗ್ರಹಿಸಬಾರದು.

2) ಯಾವುದೇ ನೋಂದಾಯಿತ 'ವ್ಯಕ್ತಿ'ಯು ಈ ಕಾಯ್ದೆಯ ನಿಬಂಧನೆಗಳು ಅಥವಾ ಅದರ ಅಡಿಯಲ್ಲಿ ರಚಿಸಲಾದ ನಿಯಮಗಳಿಗೆ ಅನುಸಾರವಾಗಿ ತೆರಿಗೆಯನ್ನು ಸಂಗ್ರಹಿಸತಕ್ಕದ್ದಲ್ಲ.

ರಾಜ್ಯಗಳಿಗೆ ತೊಂದರೆಯಾಗುವುದನ್ನು ತಪ್ಪಿಸಲು ಇದು ರೂಪುಗೊಂಡಿದೆ ಕೂಡ. ವಿಷಯ ಹೀಗಿದ್ದರೂ, ತನ್ನ 19 ಪುಟಗಳ ಅಫಿಡವಿಟ್‌ನಲ್ಲಿ ಕೇಂದ್ರಕ್ಕೆ ಸಂಬಂಧಿಸಿದ ದಾಖಲೆ, ದಿನಾಂಕ ಸೇರಿ ಇತರೆ ದಾಖಲೆಗಳನ್ನು ಸರ್ವೋಚ್ಚ ನ್ಯಾಯಾಲಯಕ್ಕೆ ಸಲ್ಲಿಸುವ ಮೂಲಕ ರಾಜ್ಯ ಸರಕಾರವು ಕಾನೂನಾತ್ಮಕ ಹೋರಾಟಕ್ಕೆ ಸಜ್ಜಾಗಿದೆ. ಇದರಲ್ಲಿ ಜನಹಿತವಿದ್ದು ನೈಜ ಪರಿಸ್ಥಿತಿಯ ಕಾರಣದಿಂದ ಹೋರಾಟಕ್ಕಿಳಿದರೆ ನಮ್ಮ ಸಹಕಾರವೂ ಇದೆ. ಅಂತಿಮವಾಗಿ ಜನರಿಗೆ ಕಲ್ಯಾಣ ಬಯಸುವುದೇ ನಮ್ಮ ರಾಜಮಾರ್ಗವಾಗಬೇಕು. ಹಾಗಂತ, ಕೇಂದ್ರ ಅಥವಾ ಹಣಕಾಸು ಸಚಿವಾಲಯವು ಸುಮ್ಮನೆ ಕೂರುವುದಿಲ್ಲ, ತನ್ನದೇ ಆದ ವಾದವನ್ನು ಕೋರ್ಟ್ ಮುಂದೆ ಇಡುತ್ತದೆ ಕೂಡ.

ಚುನಾವಣಾ ಸಂದರ್ಭದಲ್ಲಿ, ಕೇವಲ ಮೋದಿ ಸರಕಾರವನ್ನು ವಿರೋಧಿಸುವ ಕಾರಣಕ್ಕೆ ಇಂಥ ಕಾರ್ಯಕ್ಕೆ ಕೈಹಾಕಿ ಜನರ ಮತ್ತು ನ್ಯಾಯಾಲಯದ ಮುಂದೆ ರಾಜ್ಯವು ತಲೆತಗ್ಗಿಸುವಂತಾಗಬಾರದು ಎಂಬ ಕಳಕಳಿಯು ನಮಗಿದೆ. ಜನರ ಭಾವನೆಗಳೊಂದಿಗೆ ವಿಭಜನಾತ್ಮಕ ಅಲೆಗಳನ್ನು ಸೂಕ್ಷ್ಮವಾಗಿ ಹುಟ್ಟುಹಾಕುವ ಯಾವುದೇ ರೀತಿಯ ಹುನ್ನಾರಕ್ಕೆ ಪರೋಕ್ಷವಾಗಿಯೂ ನಾವು ಆಸ್ಪದ ಕೊಡಬಾರದು ಎಂಬುದನ್ನು ಮರೆಯದಿರೋಣ.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393959/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue: 94